ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
UNIVERSITY OF AGRICULTURAL SCIENCES, BANGALORE
ಐ.ಸಿ.ಎ.ಆರ್. – ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು ತಾಲ್ಲೂಕು, ತುಮಕೂರು
ICAR - KRISHI VIGYAN KENDRA, KONEHALLI, TIPTUR TQ, TUMAKURU

# ಕಲ್ಪವೃಕ್ಷ

## e - NEWS LETTER /ಇ –ವಾರ್ತಾ ಪತ್ರಿಕೆ

ಸಂಪುಟ: 10 ಜುಲೈ – ಸೆಪ್ಟೆಂಬರ್ 2025 ಸಂಚಿಕೆ: 1

## ಬಾಳೆಯಲ್ಲಿ ವೈಜ್ಞಾನಿಕ ಬೇಸಾಯ ಕ್ರಮದ ತರಬೇತಿ

ಐ.ಸಿ.ಎ.ಆರ್. – ಕೃಷಿ ವಿಜ್ಞಾನ ಕೇಂದ್ರ, ತಿಪಟೂರಿನಲ್ಲಿ ಬಾಳೆ ಬೆಳೆಯಲ್ಲಿ ಅನುಸರಿಸಬೇಕಾದ ವೈಜ್ಞಾನಿಕ ಬೇಸಾಯ ಕ್ರಮಗಳು, ಮಾರುಕಟ್ಟೆ ಮತ್ತು ಸಸ್ಯ ಸಂರಕ್ಷಣೆ ಕುರಿತು ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಡಾ. ವಿ ಗೋವಿಂದ ಗೌಡ, ಹಿರಿಯ ವಿಜ್ಞಾನಿಗಳು ರೈತರು ವಿಜ್ಞಾನಿಗಳ ಸಲಹೆ ಮೇರೆಗೆ ಕೃಷಿ ಮಾಡಿ, ಉತ್ತಮ ಬಾಳೆ ಬೆಳೆಯಿರಿ ಎಂದು ತಿಳಿಸಿದರು.



ಮುದುವರೆದು ಪ್ರಸ್ತುತ ಹವಾಮಾನದ ವೈಪರೀತ್ಯದಿಂದ ಹಲವು ಬೆಳೆಗಳಲ್ಲಿ ರೋಗ ಕೀಟಗಳು ಬರುತ್ತಿವೆ. ಆದ್ದರಿಂದ ರೈತರು ವಿಜ್ಞಾನಿಗಳಿಂದ ವೈಜ್ಞಾನಿಕ ಸಲಹೆ ಪಡೆದು ಕೃಷಿ ಮಾಡಬೇಕು ಎಂದು ಸಲಹೆ ನೀಡಿದರು.

ಕೇಂದ್ರದ ತೋಟಗಾರಿಕೆ ವಿಜ್ಞಾನಿಗಳಾದ ಡಾ. ಕೀರ್ತಿ ಶಂಕರ್ ಕೆ. ರವರು ತಾಂತ್ರಿಕ ಅಧಿವೇಶನದಲ್ಲಿ ಮಾತನಾಡಿ ಭೂಮಿ ಸಿದ್ದತೆ, ತಳಿಗಳ ಆಯ್ಕೆ, ಸಸ್ಯಾಭಿವೃದ್ದಿ, ಅಂತರ ಬೆಳೆ, ಸಸ್ಯ ಬೆಳೆ ಪ್ರಚೋದಕತೆ, ರೋಗ ಮತ್ತು ಕೀಟಗಳ ನಿಯಂತ್ರಣ ಕ್ರಮಗಳ ಕುರಿತು ತಿಳಿಸಿಕೊಟ್ಟರು.

## ಶೂನ್ಯ ಶಕ್ತಿ ಶೀತಲ ಘಟಕ: ವಿದ್ಯುತ್ ಇಲ್ಲದೆ ಹಣ್ಣು–ತರಕಾರಿಗಳಿಗೆ ತಂಪಾದ ಉಳಿವು

ನಮ್ಮ ಹಳ್ಳಿಗಳಲ್ಲಿ ಬಹುತೇಕ ರೈತರು ಬೆಳೆದು ತಂದ ಹಣ್ಣುಗಳು, ತರಕಾರಿಗಳು, ಹಾಗೂ ಬೀಜಗಳನ್ನು ಸರಿಯಾಗಿ ಶೇಖರಿಸಿಕೊಳ್ಳಲು ಉತ್ತಮ ವ್ಯವಸ್ಥೆ ಇಲ್ಲದ ಕಾರಣದಿಂದಾಗಿ ಬಹುಮಟ್ಟಿಗೆಅವು ಹಾಳಾಗುತ್ತದೆ. ವಿಶೇಷವಾಗಿ ಬಿಸಿಲು ಅಧಿಕವಾದ ದಿನಗಳಲ್ಲಿ ಈ ಸಮಸ್ಯೆ ಇನ್ನಷ್ಟು ಹೆಚ್ಚಾಗುತ್ತದೆ. ಇದರ ಪರಿಹಾರವಾಗಿ ಶೂನ್ಯ ಶಕ್ತಿ ಶೀತಲ ಘಟಕ, ಅಂದರೆ ವಿದ್ಯುತ್ ಇಲ್ಲದೆ ತಂಪು ವಾತಾವರಣವನ್ನು ಸೃಷ್ಟಿಸುವ ಒಂದು ಸರಳ ತಂತ್ರಜ್ಞಾನವನ್ನು ಬಳಸಬಹುದು. ಈ ಶೀತಲ ಘಟಕವು ಇಟ್ಟಿಗೆ, ಮರಳು ಮತ್ತು ನೀರನ್ನು ಬಳಸಿಕೊಂಡು ತಯಾರಿಸಲಾಗುತ್ತದೆ. ಇದರಲ್ಲಿ ಯಾವುದೇ ವಿದ್ಯುತ್ ಉಪಕರಣಗಳು ಬೇಕಾಗಿಲ್ಲ.





ಇದು ನೈಸರ್ಗಿಕವಾಗಿ ತಂಪು ನೀಡುವ ಒಂದು ಗೂಡಾದಂತಿದೆ. ಎರಡು ಇಟ್ಟಿಗೆ ಗೋಡೆಯ ನಡುವೆ ಮರಳು ತುಂಬಲಾಗುತ್ತದೆ ಮತ್ತು ಇಟ್ಟಿಗೆಯ ಮೇಲೆ ಪ್ರತಿದಿನ ನೀರು ಹಾಕಲಾಗುತ್ತದೆ. ಈ ನೀರು ತೇವವಾಗಿ ಬಾಷ್ಪವಾಗುತ್ತಿದ್ದು, ಗಾಳಿಯಿಂದ ತಣ್ಣನೆಯ ವಾತಾವರಣ ನಿರ್ಮಿಸುತ್ತದೆ. ಈ ರಚನೆಯೊಳಗೆ ತರಕಾರಿ ಅಥವಾ ಹಣ್ಣುಗಳನ್ನು ಇರಿಸಿದರೆ ಅವುಗಳನ್ನು ಹೆಚ್ಚು ದಿನ ಶೇಖರಿಸಿಕೊಳ್ಳಬಹುದು.

ಹೆಚ್ಚಿನ ಉಷ್ಣತೆಯ ದಿನಗಳಲ್ಲಿ ಈ ಶೀತಲ ಘಟಕದ ಒಳಗಿನ ತಾಪಮಾನ, ಹೊರಗಿನ ಹವಾಮಾನಕ್ಕಿಂತ 8 ರಿಂದ 12 ಡಿಗ್ರಿ ಸೆಲ್ಸಿಯಸ್ ಕಡಿಮೆ ಇರುತ್ತದೆ. ಈ ತಂಪಿನಲ್ಲಿ ತರಕಾರಿಗಳು 5–8 ದಿನಗಳವರೆಗೆ, ಹಣ್ಣುಗಳು 6–10 ದಿನಗಳವರೆಗೆ ತಾಜಾವಾಗಿಯೇ ಉಳಿಯುತ್ತವೆ. ಈ ರೀತಿ ಶೇಖರಿಸಿದ ಬೆಳೆಗಳೊಂದಿಗೆ ರೈತರು ಮಾರುಕಟ್ಟೆಗೆ ತಮ್ಮ ಇಚ್ಛೆಯ ಸಮಯದಲ್ಲಿ ತರುವ ಮೂಲಕ ಉತ್ತಮ ಬೆಲೆ ಪಡೆಯಬಹುದು ಎಂದು ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು ಡಾ. ವಿ. ಗೋವಿಂದಗೌಡ ತಿಳಿಸಿದರು.

ಡಾ. ಸಿಂಧು ತಮ್ಮ ಉಪನ್ಯಾಸದಲ್ಲಿ ರೈತರಿಗೆ ಘಟಕವನ್ನು ಕಟ್ಟಲು ಹೆಚ್ಚಿನ ಹಣದ ಅಗತ್ಯವಿಲ್ಲ. ಸುಮಾರು ಒಂದರಿಂದ ಎರಡು ಸಾವಿರ ರೂಪಾಯಿಯ ಒಳಗೆ ರೈತರು ತಾವೇ ನಿರ್ಮಿಸಬಹುದು. ಸಾಮಾನ್ಯವಾಗಿ 5 ಅಡಿ ಉದ್ದ, 3 ಅಡಿ ಅಗಲ ಮತ್ತು 3 ಅಡಿ ಎತ್ತರದ ಗಾತ್ರದ ಶೀತಲ ಘಟಕವನ್ನು ತಯಾರಿಸುತ್ತಾರೆ. ಇದರ ಮೇಲೆ ತಂಪು ತಡೆಗಟ್ಟಲು ಒದ್ದೆಯಾದ ಗೋಣಿಚೀಲದ ಹೊದಿಕೆಯನ್ನು ಹಾಕುತ್ತಾರೆ. ಇದನ್ನು ಮನೆ ಹಿತವಾದ ಪ್ರದೇಶದಲ್ಲಿ ಅಥವಾ ಮರದ ನೆರಳಿನಲ್ಲಿ ನಿರ್ಮಿಸುವುದು ಉತ್ತಮ.

ವಿದ್ಯುತ್ ಇಲ್ಲದ, ಶೀತಗೃಹ ಸಿಗದ, ಹವಾಮಾನ ಬದಲಾಗುವ ಗ್ರಾಮೀಣ ಪ್ರದೇಶಗಳಲ್ಲಿ ಇದು ದೊಡ್ಡ ಸಮಸ್ಯೆಯಾಗಿರುತ್ತದೆ. ಇಂಥ ಸಂದರ್ಭದಲ್ಲಿಯೇ "ಶೂನ್ಯ ಶಕ್ತಿ ಶೀತಲ ಘಟಕ" ಎಂಬ ಸರಳ ತಂತ್ರಜ್ಞಾನ ನಮ್ಮ ನೆರವಿಗೆ ಬರುತ್ತದೆ ಎಂಬ ಧ್ಯೇಯದೊಂದಿಗೆ ತಿಪಟೂರಿನ ಶಿವಪುರ ಗ್ರಾಮದಲ್ಲಿ ಡಾ. ಸಿಂಧು, ಪಿ.ಬಿ. ರವರ ಮಾರ್ಗದರ್ಶನದಲ್ಲಿ ಘಟಕದ ನಿರ್ಮಾಣ ಕೈಗೊಳ್ಳಲಾಯಿತು.

ಈ ಮಾದರಿಯ ಪ್ರದರ್ಶನದಲ್ಲಿ ಸುಮಾರು 15 ಶಾಲಾ ವಿದ್ಯಾರ್ಥಿಗಳು ಹಾಗೂ 35 ಜನ ರೈತರು ತೀವ್ರ ಆಸಕ್ತಿಯಿಂದ ಭಾಗವಹಿಸಿದರು. ಅದನ್ನು ಅನುಸರಿಸಿ ರೈತ ಮಹಿಳೆಯರು ಸಹ ಈ ಘಟಕವನ್ನು ಮಹಿಳಾ ಸ್ವಸಹಾಯ ಸಂಘದ ವತಿಯಿಂದ ನಿರ್ಮಿಸಲು ಉತ್ಸುಕತೆಯನ್ನು ತೋರಿದರು. ಕೆಲ ರೈತರು ತಮ್ಮ ತೋಟದ ಬಳಿಯೇ ಈ ಶೀತಗೃಹವನ್ನು ನಿರ್ಮಿಸಲು ನಿರ್ಧರಿಸಿದರು.

## ರಾಷ್ಟ್ರೀಯ ಆಹಾರ ಭದ್ರತೆ ಯೋಜನೆಯಡಿ ತೊಗರಿ ಬೆಳೆಯ ಗುಚ್ಛ ಮುಂಚೂಣಿ ಪ್ರಾತ್ಯಕ್ಷಿಕೆ



ತಿಪಟೂರು ತಾಲ್ಲೂಕಿನ ಕೊನೇಹಳ್ಳಿಯ ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ಗಡಿ ಗ್ರಾಮ ಚಿಕ್ಕನಾಯಕನಹಳ್ಳಿಯ ಮರೆನಡುಪಾಳ್ಯ ಹಾಗೂ ದಾಸಿಹಳ್ಳಿಯಲ್ಲಿ ರಾಷ್ಟ್ರೀಯ ಆಹಾರ ಭದ್ರತೆ ಯೋಜನೆಯಡಿ ತೊಗರಿ ಬೆಳೆಯ ಗುಚ್ಛ ಮುಂಚೂಣಿ ಪ್ರಾತ್ಯಕ್ಷಿಕೆಯನ್ನು ಚಿಕ್ಕನಾಯಕನಹಳ್ಳಿಯ ನೆಲ ಜಲ ರೈತ ಉತ್ಪಾದಕ ಕಂಪನಿ ಹಾಗೂ ಕಲ್ಪಮಿತ್ರ ರೈತ ಉತ್ಪಾದಕರ ಕಂಪನಿಯ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಯಿತು.





ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಯಾದ ಡಾ ದರ್ಶನ್ ಮಾತನಾಡಿ ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯ ಬಿಡುಗಡೆ ಮಾಡಿರುವ ಈ ಬಿ.ಆರ್.ಜಿ. – 4 ತೊಗರಿ ನಿತ್ಯ ಬಳಕೆಯಲ್ಲಿ ತರಕಾರಿಯಾಗಿಯೂ ಹಾಗೂ ಕಾಳು ರೂಪದಲ್ಲಿಯೂ ಬಳಸಲು ಸೂಕ್ತವಾಗಿದೆ. ಹಾಗಾಗಿ ಈ ತಳಿಯನ್ನು 200 ಎಕರೆ ಪ್ರದೇಶದಲ್ಲಿ ಹಮ್ಮಿಕೊಳ್ಳಲಾಗಿದೆ. ಈ ತೊಗರಿ ತಳಿಯು ಕೆಂಪು ಬಣ್ಣದ ಕಾಳುಗಳಿಂದ ಕೂಡಿದ್ದು, ಬಿತ್ತನೆಯ ಸಾಮಾನ್ಯ ಸಮಯ ಹಾಗೂ ತಡವಾಗಿಯೂ ಬಿತ್ತನೆ ಮಾಡಲು ಸೂಕ್ತವಾಗಿದೆ. ಇದು ಒಟ್ಟು 130 – 150 ದಿನಗಳಲ್ಲಿ ಕಟಾವಿಗೆ ಬರಲಿದ್ದು, ತೇವಾಂಶ ಕೊರತೆಯಲ್ಲಿಯೂ ಸಹ ಹೆಚ್ಚು ಇಳುವರಿ ಹಾಗೂ ಆದಾಯ ಪಡೆಯಬಹುದು. ರಾಗಿ – ತೊಗರಿ ಬೆಳೆ ಪರಿವರ್ತನೆ ಮೂಲಕ ರೋಗ ಹತೋಟಿ ಮತ್ತು ಹೆಚ್ಚು ಇಳುವರಿ, ಮಣ್ಣಿನ ಫಲವತ್ತತೆಯ ಸಂರಕ್ಷಣೆ ಹಾಗೂ ಆದಾಯ ಪಡೆಯಲು ಹೇಗೆ ಅನುಕೂಲವಾಗಲಿದೆ ಎಂಬುದನ್ನು ರೈತರಿಗೆ ವಿವರಿಸಿದರು.

ಮುಂದುವರೆದು ತೊಗರಿಯ ಬಿತ್ತನೆ ಬೀಜಕ್ಕೆ ಜೈವಿಕ ಗೊಬ್ಬರಗಳಿಂದ ಬೀಜೋಪಚಾರದ ಕುರಿತು ಮಾಹಿತಿ ನೀಡಿದರು. ಬಿತ್ತನೆಗೆ ಮುಂಚೆ ಎಕರೆಗೆ 24 ಗ್ರಾಂ ಸೋಡಿಯಂ ಮಾಲಿಬ್ಡೇಟ್‌ಅನ್ನು ಮಡಿಕೆ ಅಥವಾ ಪ್ಲಾಸ್ಟಿಕ್ ಪಾತ್ರೆಯಲ್ಲಿ ತೆಗೆದುಕೊಂಡು 70 ಮಿ.ಲಿ. ಬೆಲ್ಲದ ದ್ರಾವಣದಲ್ಲಿ ಕರಗಿಸಿ, ಬಂದಂತಹ ಮಿಶ್ರಣದಲ್ಲಿ ಎಕರೆಗೆ ಬೇಕಾದ 5 – 6 ಕೆ.ಜಿ. ಬಿತ್ತನೆ ಬೀಜವನ್ನು ಬೆರಸಿ, 200 ಗ್ರಾಂ ರೈಜೋಬಿಯಂ ಹಾಗೂ 200 ಗ್ರಾಂ ರಂಜಕ ಕರಗಿಸುವ ಜೀವಾಣುಗಳ ಲೇಪನ ಮಾಡಿ ನೆರಳಿನಲ್ಲಿ ಒಣಗಿಸಿ ಬಿತ್ತನೆ ಮಾಡಬೇಕು ಹಾಗೂ ತೊಗರಿಯ ಇಳುವರಿಯನ್ನು ಸುಧಾರಿಸಲು ಬಿತ್ತನೆ ಮಾಡಿದ 45 ದಿನದ ನಂತರ ಗಿಡದ ಕುಡಿಯನ್ನು ಚಿವುಟಬೇಕು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ರೈತರಿಗೆ ತೊಗರಿ ಬಿತ್ತನೆ ಬೀಜ ವಿತರಿಸಲಾಯಿತು. ಆರ್ಡರ್ ಸಂಸ್ಥೆಯ ರಘು, ಲಕ್ಷ್ಮಿಕಾಂತ್, ನಾಗರಾಜು ರೈತ ಉತ್ಪಾದಕ ಕಂಪನಿಗಳ ಅಧಿಕಾರಿಗಳಾದ ಮಧು ಹಾಗೂ ಗಿರೀಶ್ ಉಪಸ್ಥಿತರಿದ್ದರು.

## ಕೆ.ವಿ.ಕೆ., ಕೊನೇಹಳ್ಳಿ ವತಿಯಿಂದ ಹರಳು ಬೆಳೆಯ ಗುಚ್ಚ ಮುಂಚೂಣಿ ಪ್ರಾತ್ಯಕ್ಷಿಕೆ

ಐ.ಸಿ.ಎ.ಆರ್. – ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ ವತಿಯಿಂದ ಮೂರು ಗ್ರಾಮದಲ್ಲಿ ತಡಸೂರು, ತಿಪಟೂರು ತಾಲ್ಲೂಕು, ಬಾಲದೇವರಹಟ್ಟಿ ಹಾಗೂ ಯಳನಾಡು, ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಹರಳು ಬೆಳೆಯ ಗುಚ್ಚ ಮುಂಚೂಣಿ ಪ್ರಾತ್ಯಕ್ಷಿಕೆ ಕೈಗೊಳ್ಳಲಾಯಿತು. ಇತ್ತೀಚಿನ ದಿನಗಳಲ್ಲಿ ಹರಳು ಬೆಳೆಯು ಬಹಳಷ್ಟು ಪ್ರದೇಶದಲ್ಲಿ ವಾಣಿಜ್ಯ ಬೆಳೆಯಾಗಿ ಬೆಳೆಯಲಾಗುತ್ತಿದೆ.




ಇದರ ಒಂದು ಮುಖ್ಯವಾದ ಉಪಯೋಗ ಅಂದರೆ ಎಣ್ಣೆ ಈ ಹರಳೆಣ್ಣೆಯನ್ನ ಇತರೆ ಕಾರ್ಖಾನೆಗಳಲ್ಲಿ ನಿರ್ಜಲೀಕರಿಸಿದ ಹರಳೆಣ್ಣೆ ಅಥವಾ ಕೀಲೆಣ್ಣೆ ಎಂದು ಕರೆಯುತ್ತೀವಿ. ಇಂತಹ ಒಂದು ಕೀಲೆಣ್ಣೆಯನ್ನ ಹೆಚ್ಚೆಚ್ಚಾಗಿ ಉಪಯೋಗ ಮಾಡುವುದರಿಂದ ಈ ಬೆಳೆಗೆ ಬಹಳಷ್ಟು ಬೇಡಿಕೆ ಇದೆ. ಈ ಒಂದು ಸಮಯದಲ್ಲಿ ಹರಳು ಬೆಳೆಯ ಹೊಸ ಸಂಕರಣ ತಳಿಯಾದ ಐ.ಸಿ.ಹೆಚ್.–5 ವನ್ನು ರೈತರಿಗೆ ಪರಿಚಯಿಸಲಾಯಿತು. ಈ ತಳಿಯು ಎಕರೆಗೆ 6 – 6.5 ಕ್ವಿ ರಷ್ಟು ಇಳುವರಿ ಕೊಡುತ್ತದೆ. ಹಾಗೆ ಬೇರೆ ಸಂಕರಣ ತಳಿಗಳನ್ನ ಹೋಲಿಸಿದರೆ ಶೇ. 15–20 ರಷ್ಟು ಇಳುವರಿ ಬರುತ್ತದೆ. ಒಣ ಪ್ರದೇಶದಲ್ಲಿ ಹಾಗೂ ಮಳೆಯಾಶ್ರಿತ ಪ್ರದೇಶದಲ್ಲಿಯು ಸಹ ಒಳ್ಳೆ ಇಳುವರಿ ಬರುತ್ತದೆ ಎಂದು ಕೆ.ವಿ.ಕೆ. ಕೊನೇಹಳ್ಳಿಯ ಬೇಸಾಯ ಶಾಸ್ತ್ರ ವಿಜ್ಞಾನಿಯಾದ ಡಾ. ತಸ್ಮಿಯಾ ಕೌಸರ್ ರವರು ತಿಳಿಸಿದರು. ಈ ತಳಿಯ ಬೀಜವು ಎಕರೆಗೆ ಎರಡು ಕೆ.ಜಿ ಬಿತ್ತನೆ ಬೀಜ ಬೇಕಾಗುತ್ತದೆ. ಬಿತ್ತನೆಯ ಮುಂಚಿತವಾಗಿ 5–6 ಗಂಟೆ ನೀರಿನಲ್ಲಿ ನೆನಸಿ ಬಿತ್ತನೆ ಮಾಡುವುದರಿಂದ ಬೇಗ ಮೊಳಕೆ ಒಡೆಯುವಿಕೆ ಹಾಗೂ ಒಳ್ಳೆ ಸಸ್ಯ ಸಂಖ್ಯೆ ಪಡೆಯಬಹುದು. ಬಿತ್ತುವಾಗ ಮೂರು ಅಡಿ ಅಂತರದ ಸಾಲುಗಳಲ್ಲಿ ಬೀಜದಿಂದ ಬೀಜಕ್ಕೆ ಒಂದು ವರೆ ಅಡಿ ಅಂತರ ವಿರುವಂತೆ ಬಿತ್ತನೆ ಮಾಡಬೇಕು, ಬಿತ್ತನೆ ಸಮಯದಲ್ಲಿ 15:15:10 ಕೆ.ಜಿ ಸಾರಜನಕ, ರಂಜಕ ಹಾಗೂ ಪೊಟ್ಯಾಷ್ ಒದಗಿಸಬೇಕು, ಹರಳಿನಲ್ಲಿ ಬಿತ್ತನೆ ಮಾಡಿದ 45–50 ದಿನಗಳ ನಂತರ ಅನಾವಶ್ಯಕ ಕವಲು ಕುಡಿಗಳನ್ನು ಚಿವುಟುವುದರಿಂದ ಹೆಚ್ಚಿನ ಇಳುವರಿ ಹಾಗೂ ಆದಾಯ ಪಡೆಯಬಹುದು. ಕೆ.ವಿ.ಕೆ. ಕೊನೇಹಳ್ಳಿಯ ವತಿಯಿಂದ ಗುಚ್ಚ ಮುಂಚೂಣಿ ಪ್ರಾತ್ಯಕ್ಷಿಕೆಯ ಪ್ರಯುಕ್ತವಾಗಿ ಹರಳು ಬೀಜ (ಐ.ಸಿ.ಹೆಚ್. – 05) ಹಾಗೂ ಜಿಪ್ಸಮ್ ರೈತರಿಗೆ ವಿತರಿಸಲಾಯಿತು.

## ಕೆ.ವಿ.ಕೆ, ಕೊನೇಹಳ್ಳಿ ವತಿಯಿಂದ 25 ನೇ ಪಾರ್ಥೇನಿಯಂ ನಿರ್ಮೂಲನಾ ಕಾರ್ಯಕ್ರಮ



ಐ.ಸಿ.ಎ.ಆರ್ ಕೃಷಿ ವಿಜ್ಞಾನ ಕೇಂದ್ರ ಕೊನೇಹಳ್ಳಿ ವತಿಯಿಂದ 25 ನೇ ಪಾರ್ಥೇನಿಯಂ ನಿರ್ಮೂಲನಾ ಕಾರ್ಯಕ್ರಮವನ್ನು ಕನ್ನಡ ಭಾರತಿ ಪ್ರೌಢಶಾಲೆ, ಹೊನ್ನವಳ್ಳಿ, ತಿಪಟೂರು ತಾಲ್ಲೂಕಿನಲ್ಲಿ ದಿನಾಂಕ 22/08/2025 ರಂದು ಹಮ್ಮಿಕೊಳ್ಳಲಾಯಿತು, ಕೆ.ವಿ.ಕೆ, ಕೊನೇಹಳ್ಳಿಯ

ಬೇಸಾಯ ಶಾಸ್ತ್ರ ವಿಜ್ಞಾನಿಯಾದ ಡಾ. ತಸ್ಮಿಯಾ ಕೌಸರ್ ರವರು ಪಾರ್ಥೇನಿಯಂ ಕಳೆಯು 1950 ರಲ್ಲಿ ಮೆಕ್ಸಿಕೋ ದಿಂದ ಆಹಾರ ಧಾನ್ಯಗಳನ್ನು ಆಮದು ಮಾಡುವಾಗ ಭಾರತ ದೇಶಕ್ಕೆ ಪ್ರಪ್ರಥಮ ಭಾರಿ ಮಹರಾಷ್ಟ್ರದ ಪುನೆಯಲ್ಲಿ ಕಂಡುಬಂತು, ಪಾರ್ಥೇನಿಯಂ ಒಂದು ಅಪಾಯಕಾರಿ ಕಳೆಯಾಗಿದ್ದು, ಮಾನವರಲ್ಲಿ ಚರ್ಮದ ಅಲರ್ಜಿಗಳು ಮತ್ತು ಉಸಿರಾಟದ ಸಮಸ್ಯಗಳಿಗೆ ಕಾರಣವಾಗುತ್ತದೆ. ಇದು ವೇಗವಾಗಿ ಬೆಳೆಯುತ್ತದೆ, ಬೀಜಗಳ ಮೂಲಕ ಹರಡುತ್ತದೆ ಮತ್ತು ಹೆಚ್ಚು ಫಲವತ್ತಾದ ಮಣ್ಣಿನಲ್ಲಿ ಬೆಳೆಯುತ್ತದೆ. ಅದರಿಂದ ಮಣ್ಣಿನಲ್ಲಿರುವಂತಹ ಪೋಷಕಾಂಶಗಳನ್ನು ಹೀರಿಕೊಳ್ಳುತ್ತದೆ, ಇದರಿಂದ ಈ ಒಂದು ಕಳೆಯ ನಿಯಂತ್ರಣ ಅತಿ ಅವಶ್ಯಕ ಕಳೆಯ ಆರಂಭಿಕ ಬೆಳವಣಿಗೆಯ ಹಂತದಲ್ಲಿ ಕೈ ಕಳೆ ತೆಗೆಯುವುದರಿಂದ, ಕೃಷಿ ಭೂಮಿಯನ್ನು ಆಳವಾದ ಉಳುಮೆ ಮಾಡುವುದರಿಂದ ಹಾಗೂ ಪಾರ್ಥೇನಿಯಂ ಕಳೆ ತಿನ್ನುವ ಹುಳ (ಮೆಕ್ಸಿಕನ್ ಬೀಟಲ್) ಗಳನ್ನು ಬಿಡುವುದರಿಂದ ಈ ಕಳೆಯನ್ನು ನಿಯಂತ್ರಣ ಮಾಡಬಹುದು ಎಂದು ತಿಳಿಸಿದರು. ಕೆ.ವಿ.ಕೆಯ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು ಡಾ. ವಿ. ಗೋವಿಂದಗೌಡ ರವರು ಪಾರ್ಥೇನಿಯಂ ಕಳೆಯ ಹರಡುವಿಕೆ, ಮಣ್ಣಿನಲ್ಲಿ ಅಗತ್ಯವಾದ ಪೋಷಕಾಂಶಗಳು ನೀರಿಗಾಗಿ ಬೆಳೆಗಳನ್ನು ಹಿಂದಿಕ್ಕುವ ಮೂಲಕ ಬೆಳೆ ಉತ್ಪಾದನೆಯನ್ನು ಕಡಿಮೆ ಮಾಡುತ್ತದೆ ಎಂದು ತಿಳಿಸಿದರು. ಶಾಲೆಯ ಪ್ರಾಂಶುಪಾಲರಾದ ಶ್ರೀ ಆನಂದ್, ಶಾಲೆಯ ಶಿಕ್ಷಕರು, ಶಿಕ್ಷಕಿಯರು ಹಾಗೂ ಶಾಲೆಯ ಮಕ್ಕಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

## ತಡವಾದ ಮುಂಗಾರಿಗೆ ಸೂಕ್ತವಿರುವಂತಹ ರಾಗಿ ತಳಿ ಎಂ.ಎಲ್–322 ಪ್ರಾತ್ಯಕ್ಷಿಕೆ



ಐ.ಸಿ.ಎ.ಆರ್ ಕೃಷಿ ವಿಜ್ಞಾನ ಕೇಂದ್ರ ಕೊನೇಹಳ್ಳಿ ವತಿಯಿಂದ ರಾಗಿ ತಳಿ ಎಂ.ಎಲ್–322 ವನ್ನು ಬುಳ್ಳೇನಹಳ್ಳಿ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಪ್ರಾತ್ಯಕ್ಷಿಕೆ ಮಾಡಲಾಯಿತು. ಎಂ.ಎಲ್–322 ತಳಿಯು ತಡವಾದ ಮುಂಗಾರಿಗೆ ಸೂಕ್ತವಾಗಿದ್ದು ಆಗಸ್ಟ್ ತಿಂಗಳಿನಿಂದ ಸೆಪ್ಟಂಬರ್ 15 ರವರೆಗೆ ಬಿತ್ತನೆ ಮಾಡಬಹುದು

ಈ ತಳಿಯು ಮಧ್ಯಮ ಅವಧಿ ತಳಿಯಾಗಿದ್ದು 105–110 ದಿನಕ್ಕೆ ಕಟಾವಿಗೆ ಬರುತ್ತದೆ, 15–20 ದಿನದವರೆಗೂ ಮಳೆ ಇಲ್ಲದೆ ಶುಷ್ಕ ಇದ್ದರು ಭರ ಸಹಿಷ್ಣತೆ ಹೊಂದಿರುತ್ತದೆ ಹಾಗೂ ಸ್ವಲ್ಪ ಮಟ್ಟಕ್ಕೆ ಬೆಂಕಿ ರೋಗಕ್ಕೆ ನಿರೋಧಕತೆ ಹೊಂದಿರುತ್ತದೆ. ಇಳುವರಿಯು ಎಕರೆಗೆ 10–12 ಕ್ವಿಂಟಾಲ್ ಖುಷ್ಕಿ ಬೆಳೆಯಾಗಿ ಬೆಳೆಯುವುದರಿಂದ ಹಾಗೂ 15–20 ಕ್ವಿಂಟಾಲ್ ನೀರಾವರಿ ಬೆಳೆಯಾಗಿ ಬೆಳೆಯುವುದರಿಂದ ಪಡೆಯಬಹುದು ಎಂದು ಡಾ. ತಸ್ಮಿಯಾ ಕೌಸರ್ ರವರು ತಿಳಿಸಿದರು.

ಕೆ.ವಿ.ಕೆ, ಕೊನೇಹಳ್ಳಿಯ ಬೇಸಾಯ ಶಾಸ್ತ್ರ ವಿಜ್ಞಾನಿ ಡಾ. ತಸ್ಮಿಯಾ ಕೌಸರ್ ರವರು ಮತನಾಡಿ ರಾಗಿ ಬಿತ್ತನೆ ಮಾಡುವ 3–4 ವಾರಗಳ ಮುಂಚಿತವಾಗಿ ಎಕರೆಗೆ 3 ಟನ್ ಕೊಟ್ಟಿಗೆ ಗೊಬ್ಬರವನ್ನು ಮಣ್ಣಿನಲ್ಲಿ ಸೇರಿಸಬೇಕು ಒಂದು ಎಕರೆ ಪ್ರದೇಶಕ್ಕೆ 10 ಕೆ.ಜಿ ರಾಗಿ ಬೀಜ ಬೇಕಾಗುತ್ತದೆ. ಪ್ರತಿ ಕಿ.ಗ್ರಾಂ. ಬಿತ್ತನೆ ಬೀಜಕ್ಕೆ 2 ಗ್ರಾಂ ಕಾರ್ಬನ್ಡೈಜಿಂ ಶಿಲೀಂದ್ರನಾಶಕದಿಂದ ಬೀಜೋಪಚಾರ ಮಾಡಿ ಬಿತ್ತನೆ ಮಾಡುವುದರಿಂದ

ಬೆಂಕಿ ರೋಗವನ್ನು ತಡೆಗಟ್ಟಬಹುದು ಶಿಫಾರಸ್ಸು ಮಾಡಿದ ಪ್ರಮಾಣದಲ್ಲಿ ರಸಗೊಬ್ಬರಗಳಾದ ಸಾರಜನಕ 10 ಕಿ.ಗ್ರಾಂ, ರಂಜಕ 15 ಕಿ.ಗ್ರಾಂ, ಪೊಟ್ಯಾಷ್ 16 ಕಿ.ಗ್ರಾಂ ಹಾಗೂ ಲಘು ಪೋಷಕಾಂಶಗಳಾದ 5 ಕಿ.ಗ್ರಾಂ ಸತುವಿನ ಸಲ್ಫೇಟ್, 4 ಕಿ.ಗ್ರಾಂ ಬೋರಾಕ್ಸ್ ಬಿತ್ತನೆ ಸಮಯದಲ್ಲೇ ಒದಗಿಸುವುದರಿಂದ ಹೆಚ್ಚು ಇಳುವರಿಯನ್ನು ಪಡೆಯಬಹುದು. ನಮ್ಮ ತುಮಕೂರು ಜಿಲ್ಲೆಯಾದ್ಯಂತ ರಾಗಿ ಬೆಳೆಯುವ ರೈತರಿಗೆ ಅತೀ ಹೆಚ್ಚು ಸಮಸ್ಯೆ ಬಂದಿರುವುದು ಅಕ್ಕಿಹುಲ್ಲು ಹಾಗೂ ಗಂಡು ರಾಗಿ ಈ ಕಳೆಯನ್ನು ಹತೋಟಿ ಮಾಡಲು ರಾಗಿ ಬಿತ್ತುವ ಒಂದು ವಾರ ಮುಂಚಿತವಾಗಿ ಪ್ಯಾರಾಕ್ವಾಟ್ ಕಳೆನಾಶಕವನ್ನು 2–5 ಎಂ.ಎಲ್ ಪ್ರತಿ ಲೀಟರ್ ನೀರಿನಲ್ಲಿ ವಿಶ್ರಣ ಮಾಡಿ ಸಿಂಪಡಿಸುವುದರಿಂದ ಈ ಕಳೆಯನ್ನು ಹತೋಟಿ ಮಾಡಬಹುದು. ಅಲ್ಲದೆ ರಾಗಿಯಲ್ಲಿ ಅಣ್ಣೆ ಸೊಪ್ಪು ಹತೋಟಿ ಮಾಡಲು ಕೈ ಕಳೆ ತೆಗೆಯುವುದರಿಂದ ಹಾಗೂ 2,4 ಡಿ–ಸೋಡಿಯಂ ಸಾಲ್ಟ್ ಕಳೆನಾಶಕ ಬಿತ್ತನೆ ಮಾಡಿದ 15–20 ದಿನಕ್ಕೆ ಎಕರೆಗೆ 200 ಲೀಟರ್ ಬ್ಯಾರಾಲ್‌ನಲ್ಲಿ ಅರ್ಧ ಕೆ.ಜಿ ಯಷ್ಟು 2,4–ಡಿ ಕಳೆನಾಶಕ ಮಿಶ್ರಣ ಮಾಡಿ ಸಿಂಪಡಿಸುವುದರಿಂದ ಅಣ್ಣೆ ಸೊಪ್ಪು ಹತೋಟಿ ಮಾಡಬಹುದು ಎಂದು ತಿಳಿಸಿದರು,

ಇದೇ ಸಮಯದಲ್ಲಿ ಕೆ.ವಿ.ಕೆ, ಕೊನೇಹಳ್ಳಿಯ ಪಶು ವಿಜ್ಞಾನಿಯಾದ ಡಾ. ಶಿವಪ್ಪ ನಾಯಕ್ ಹೆಚ್. ಬಿ ರವರು ಕಾರ್ಯಕ್ರಮದಲ್ಲಿ ಭಾಗವಹಿಸಿ ಮೇವಿನ ಲಭ್ಯತೆ, ಮೇವಿನ ಗುಣಮಟ್ಟ ಬಗ್ಗೆ ಮಾಹಿತಿ ನೀಡಿದರು, ನಂತರ ರೈತರಿಗೆ ರಾಗಿ ಎಂ.ಎಲ್–322 ಬೀಜ, ಕಾರ್ಬೆಂಡೈಜಿಂ, ಸತುವಿನ ಸಲ್ಫೇಟ್ ಹಾಗೂ ಬೋರಾಕ್ಸ್ ಅನ್ನು ಕೆ.ವಿ.ಕೆ ಕೊನೇಹಳ್ಳಿ ವತಿಯಿಂದ ಒದಗಿಸಲಾಯಿತು.

## ಮಾಜಿ ಸೈನಿಕರಿಗಾಗಿ ಸಾವಯವ ಕೃಷಿಯ ಕುರಿತು ತರಬೇತಿ

ಐಸಿಎಆರ್–ಕೆವಿಕೆ, ತಿಪಟೂರು, ತುಮಕೂರು ಜಿಲ್ಲೆಯು ಮಾಜಿ ಸೈನಿಕರಿಗಾಗಿ ಸಾವಯವ ಕೃಷಿಯ ಕುರಿತು ಎರಡು ದಿನಗಳ (28/09/2025 ಮತ್ತು 29/09/2025) ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿತ್ತು. ಈ ಕಾರ್ಯಕ್ರಮದಲ್ಲಿ, ಸಾವಯವ ಕೃಷಿಯ ಮಹತ್ವ ಮತ್ತು ತತ್ವಗಳು, ಮಣ್ಣಿನ ಆರೋಗ್ಯ ನಿರ್ವಹಣೆ ಮತ್ತು ಸುಸ್ಥಿರ ಕೃಷಿಯಲ್ಲಿ ಜೈವಿಕ ಗೊಬ್ಬರಗಳು ಮತ್ತು ಜೈವಿಕ ಕೀಟನಾಶಕಗಳ ಪಾತ್ರ ಮತ್ತು ಅನ್ವಯದ ಕುರಿತು ಮಾಹಿತಿ, ಬೀಜಾಮೃತ, ಜೀವಾಮೃತ, ಪಂಚಗವ್ಯ ತಯಾರಿಕೆ ಮತ್ತು ಬಳಕೆ ಕುರಿತು ಪದ್ಧತಿ ಪ್ರಾತ್ಯಕ್ಷಿಕೆ ಮೂಲಕ ತಿಳಿಯಪಡಿಸಲಾಯಿತು. ಒಟ್ಟು 30 ಮಾಜಿ ಸೈನಿಕರ ರೈತರು ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು.







## ವಿಶ್ವ ತೆಂಗು ದಿನಾಚರಣೆ

ತಿಪಟೂರು ತಾಲೂಕಿನ ಗೋಪಾಲಪುರ ಗ್ರಾಮದಲ್ಲಿ ಐಸಿಎಆರ್–ಕೆವಿಕೆ, ತಿಪಟೂರು ಮತ್ತು ಪ್ಯಾರಾಚೂಟ್ ಕಲ್ಪವೃಕ್ಷ ಫೌಂಡೇಶನ್ ಜೊತೆಗೂಡಿ ವಿಶ್ವ ತೆಂಗು ದಿನಾಚರಣೆಯನ್ನು 06/09/2025 ರಂದು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರಾದ ಡಾ. ಶಂಕರ್, ಎಂ.ಎಚ್. ರವರು ತೆಂಗಿನ ಕೃಷಿಯ ವ್ಯಾಪ್ತಿ ಮತ್ತು ಪ್ರಾಮುಖ್ಯತೆ ಮತ್ತು ಕೆವಿಕೆ ಪಾತ್ರದ ಕುರಿತು ರೈತ ಸಮುದಾಯಕ್ಕೆ ತಿಳಿಸಿದರು.




ಡಾ. ಕೀರ್ತಿಶಂಕರ್, ಕೆ., ವಿಜ್ಞಾನಿ (ತೋಟಗಾರಿಕೆ) ಇವರು ಸಮಗ್ರ ಬೆಳೆ ನಿರ್ವಹಣೆ, ಅಂತರ–ಬೆಳೆ, ಪೋಷಕಾಂಶ ಮತ್ತು ನೀರಿನ ನಿರ್ವಹಣೆ ಮತ್ತು ತೆಂಗಿನಕಾಯಿಯಲ್ಲಿ ಕೀಟ ಮತ್ತು ರೋಗ ನಿರ್ವಹಣೆಯ ಕುರಿತು ತಿಳಿಸಿದರು.

## ಪಶು ಆರೋಗ್ಯ ಶಿಬಿರ

ಐಸಿಎಆರ್–ಕೆವಿಕೆ, ತಿಪಟೂರು, ತುಮಕೂರು ಜಿಲ್ಲೆಯು ಬೆಂಗಳೂರಿನ ಜಿಕೆವಿಕೆ, ರಾವೆ (RAWEP) ವಿದ್ಯಾರ್ಥಿಗಳು ಮತ್ತು ಪಶುಸಂಗೋಪನಾ ಇಲಾಖೆ ಸಹಯೋಗಯೊಂದಿಗೆ ಕುಣಿಗಲ್ ತಾಲ್ಲೂಕಿನ ಹುಲಿಯೂರುದುರ್ಗ ಹೋಬಳಿಯ ತಾವರೆಕೆರೆಯಲ್ಲಿ 08/09/2025 ರಂದು ಪಶು ಆರೋಗ್ಯ ಶಿಬಿರ ಹಮ್ಮಿಕೊಳ್ಳಲಾಗಿತ್ತು. ಸುಮಾರು 110 ಪ್ರಾಣಿಗಳಿಗೆ ಜಂತುಹುಳು ನಿವಾರಣೆ ಮಾಡಲಾಯಿತು, 30 ಪ್ರಾಣಿಗಳಿಗೆ ವಿವಿಧ ಬಂಜೆ ರೋಗ ಸಮಸ್ಯೆಗಳಿಗೆ ಚಿಕಿತ್ಸೆ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಕೇಂದ್ರದ ಡಾ. ಹೆಚ್.ಬಿ. ಶಿವಪ್ಪ ನಾಯಕ, ವಿಜ್ಞಾನಿಗಳು (ಪಶು ವಿಜ್ಞಾನ) ಭಾಗವಹಿಸಿದ್ದರು.



## ಸ್ವಚ್ಛತಾ ಹಿ ಸೇವಾ ಅಭಿಯಾನ



ಐಸಿಎಆರ್–ಕೆವಿಕೆ, ತಿಪಟೂರು, ತುಮಕೂರು ಜಿಲ್ಲೆಯು ಕೋನೇಹಳ್ಳಿಯ ಪಶುಸಂಗೋಪನಾ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಸ್ವಚ್ಛತಾ ಹಿ ಸೇವಾ ಅಭಿಯಾನವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ, ಸ್ವಚ್ಛತೆಯ ಮಹತ್ವದ ಕುರಿತು ಜಾಗೃತಿ ಮೂಡಿಸಲು 'ಸ್ವಚ್ಛ ಪರಿಸರದಿಂದ ಪಶು ಮತ್ತು ಮಾನವ ಆರೋಗ್ಯ' ಎಂಬ ವಿಷಯದ ಕುರಿತು ಪ್ರಬಂಧ ಸ್ಪರ್ಧೆಯನ್ನು ಆಯೋಜಿಸಲಾಯಿತು.ಮತ್ತು ಮೂರು ಅತ್ಯುತ್ತಮ ಪ್ರಬಂಧಗಳನ್ನು ಸನ್ಮಾನಿಸಲಾಯಿತು. ಇದಲ್ಲದೆ, ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯಿಂದ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವ ಬಗ್ಗೆ ಏಕತೆ ಮತ್ತು ಸಾಮೂಹಿಕ ಜವಾಬ್ದಾರಿಯನ್ನು ಸಂಕೇತಿಸಲು ಮಾನವ ಸರಪಳಿಯನ್ನು ರಚಿಸಲಾಯಿತು.

## ಒಳ ಅವರಣ ತರಬೇತಿಗಳು

| ಕ್ರ.ಸಂ. | ಒಳ ಅವರಣ | ದಿನಾಂಕ | ಒಟ್ಟು ಶಿಬಿರಾರ್ಥಿಗಳು |
|---|---|---|---|
| 1 | ಬಾಳೆ ಬೆಳೆಯ ವೈಜ್ಞಾನಿಕ ಬೇಸಾಯ ಪದ್ಧತಿ | 17/07/2025 | 128 |
| 2 | ಸಾವಯವ ಕೃಷಿಯ ಪರಿಚಯ | 12/07/2025 | 85 |
| 3 | ಅಡಿಕೆಯ ವೈಜ್ಞಾನಿಕ ಕೃಷಿ | 07–08/08/2025 | 45 |
| 4 | ಮಣ್ಣಿನ ತ್ಯಾಜ್ಯ ನಿರ್ವಹಣೆ ಮತ್ತು ಗೊಬ್ಬರ ತಂತ್ರಜ್ಞಾನ | 19/09/2025 | 15 |
| 5 | ಮಾಜಿ ಸೇನಾ ರೈತರಿಗೆ ಸಾವಯವ ಕೃಷಿ ತರಬೇತಿ | 29/09/2025 ರಿಂದ 30/09/2025 ರವರೆಗೆ | 25 |

## ಹೊರಾವರಣ ತರಬೇತಿಗಳು

| ಕ್ರ.ಸಂ. | ಹೊರಾವರಣ | ಸ್ಥಳ | ದಿನಾಂಕ | ಒಟ್ಟು ಶಿಬಿರಾರ್ಥಿಗಳು |
|---|---|---|---|---|
| 1 | ಬದನೆಕಾಯಿಯಲ್ಲಿ ಉತ್ಪಾದನಾ ತಂತ್ರಜ್ಞಾನಗಳು | ಬಿದರೆಗುಡಿ | 18/07/2025 | 30 |
| 2 | ನೈಸರ್ಗಿಕ ಕೃಷಿ | ಬಿಳಿಗೆರೆ | 23/07/2025 | 45 |
| 3 | ಹಸಿರು ಎಲೆ ತರಕಾರಿಗಳಿಗೆ ಕಡಿಮೆ ವೆಚ್ಚದ ಶೀತಲ ಶೇಖರಣಾ ತಂತ್ರಗಳು | ಗುಡಿಗೊಂಡನಹಳ್ಳಿ | 09/07/2025 | 18 |
| 4 | ತೊಗರಿ ಬೀಜಗಳ ಬೀಜ ಉತ್ಪಾದನೆ | ತಿಮಲಾಪುರ | 22/07/2025 | 30 |
| 5 | ಕ್ಯಾಸ್ಟರ್‌ನಲ್ಲಿ ಕೀಟ ಮತ್ತು ರೋಗ ನಿರ್ವಹಣೆ ಉತ್ಪಾದನಾ ತಂತ್ರಜ್ಞಾನಗಳು | ಸಿಂಗಾಪುರ | 23/07/2025 | 30 |
| 6 | ರಾಗಿ ಉತ್ಪಾದನಾ ತಂತ್ರಜ್ಞಾನಗಳು | ಹೊನ್ನೆಬಾಗಿ | 23/07/2025 | 35 |
| 7 | ಮಹಿಳೆಯರಲ್ಲಿ ಉದ್ಯಮಶೀಲತಾ ಗುಣಗಳು | ತಿಪಟೂರು | 20/08/2025 | 55 |
| 8 | ತೆಂಗಿನಕಾಯಿಯಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆ | ಸೂಳೇಕೆರೆ, ತುರುವೇಕೆರೆ ತಾ. | 14/08/2025 | 22 |
| 9 | ತೊಗರಿಯ ಸಮಗ್ರ ಬೆಳೆ ನಿರ್ವಹಣೆ | ತುರುವೇಕೆರೆ | 14/08/2025 | 60 |
| 10 | ಮೇವಿನ ಜೋಳದ ಸಮಗ್ರ ಬೆಳೆ ನಿರ್ವಹಣೆ | ಪರುವಗೊಂಡನಹಳ್ಳಿ | 30/08/2025 | 30 |
| 11 | ತೆಂಗಿನ ಕೃಷಿ ಮತ್ತು ಸಸ್ಯ ಸಂರಕ್ಷಣೆ | ಗೋಪಾಲಪುರ | 06/09/2025 | 45 |
| 12 | ಮಣ್ಣಿನ ಮಾದರಿ ಸಂಗ್ರಹಣೆ ಮತ್ತು ಮಣ್ಣು ಪರೀಕ್ಷೆ ಆಧಾರಿತ ರಸಗೊಬ್ಬರ ಬಳಕೆ | ಬಾಗುವಾಳ | 24/09/2025 | 35 |

## ವಿಸ್ತರಣಾ ಕಾರ್ಯಕರ್ತರಿಗೆ ತರಬೇತಿ ಕಾರ್ಯಕ್ರಮ

| ಕ್ರ.ಸಂ. | ವಿಷಯ | ಸ್ಥಳ | ದಿನಾಂಕ | ಒಟ್ಟು ಶಿಬಿರಾರ್ಥಿಗಳು |
|---|---|---|---|---|
| 1 | ಕೃಷಿಯಲ್ಲಿ ನೂತನ ತಂತ್ರಜ್ಞಾನಗಳ ಪರಿಚಯ | ಕೆ.ವಿ.ಕೆ., ಕೊನೇಹಳ್ಳಿ | 15/07/2025 | 45 |
| 2 | ತಿಪಟೂರಿನ ಸಿಡಿಪಿಒ ವಿಸ್ತರಣಾ ಸಿಬ್ಬಂದಿಗೆ ತೆಂಗಿನಕಾಯಿಯಲ್ಲಿ ಮೌಲ್ಯವರ್ಧನೆ | ಕೆ.ವಿ.ಕೆ., ಕೊನೇಹಳ್ಳಿ | 04.09.2025 | 60 |

## ಸಹಭಾಗಿತ್ವದಲ್ಲಿ ಕೈಗೊಂಡ ತರಬೇತಿಗಳು

| ಕ್ರ.ಸಂ | ವಿಷಯ | ಸಹಭಾಗಿತ್ವ ಸಂಸ್ಥೆ | ದಿನಾಂಕ | ಒಟ್ಟು |
|---|---|---|---|---|
| 1. | ತೆಂಗಿನ ಚಿಪ್ಪಿನಿಂದ ಕರಕುಶಲ ವಸ್ತುಗಳ ತಯಾರಿಸುವ ತರಬೇತಿ | ಎಸ್.ಕೆ.ಡಿ.ಆರ್.ಡಿ.ಪಿ, ತಿಪಟೂರು | 16/07/2025 ರಿಂದ 23/07/2025 | 30 |

## ಪ್ರಮುಖ ದಿನಗಳು / ಕಾರ್ಯಕ್ರಮಗಳು

| ಕ್ರ.ಸಂ. | ವಿಷಯ | ಸ್ಥಳ | ದಿನಾಂಕ | ಒಟ್ಟು ಶಿಬಿರಾರ್ಥಿಗಳು |
|---|---|---|---|---|
| 1 | ಪ್ರಧಾನಮಂತ್ರಿ ಕಿಸಾನ್ ನಿಧಿಯ 20 ನೇ ಕಂತು ನೇರ ಪ್ರಸಾರ | ಕೆ.ವಿ.ಕೆ., ಕೊನೇಹಳ್ಳಿ | 02/08/2025 | 325 |
| 2 | ತೋಟಗಾರಿಕೆ ದಿನ | ಕೆ.ವಿ.ಕೆ., ಕೊನೇಹಳ್ಳಿ | 08/08/2025 | 40 |
| 3 | ರಾಷ್ಟ್ರೀಯ ಪೌಷ್ಟಿಕಾಂಶ ವಾರ | ಕೆ.ವಿ.ಕೆ., ಕೊನೇಹಳ್ಳಿ | 04/09/2025 | 120 |
| 4 | ರೇಬಿಸ್ ರೋಗ ಮತ್ತು ಅದರ ತಡೆಗಟ್ಟುವಿಕೆ | ಹೊನ್ನವಳ್ಳಿ | 17/09/2025 | 75 |
| 5 | ದೈನಂದಿನ ಜೀವನದಲ್ಲಿ ಸ್ವಚ್ಛತಾ ಪದ್ಧತಿಗಳನ್ನು ಅಳವಡಿಸಿಕೊಳ್ಳುವ ಮಹತ್ವ | ಹೊನ್ನವಳ್ಳಿ | 17/09/2025 | 75 |
| 6 | ಸುಸ್ಥಿರ ತ್ಯಾಜ್ಯ ಬಳಕೆಗಾಗಿ ಘನ ತ್ಯಾಜ್ಯ ನಿರ್ವಹಣಾ ಅಭ್ಯಾಸ | ಕೆ.ವಿ.ಕೆ., ಕೊನೇಹಳ್ಳಿ | 18/09/2025 | 30 |
| 7 | ಗ್ರಾಮೀಣ ಜೀವನದಲ್ಲಿ ನೈರ್ಮಲ್ಯ ಮತ್ತು ಸ್ವಚ್ಛತೆಯ ಮಹತ್ವ | ಪರುವಗೊಂಡನಹಳ್ಳಿ | 19/09/2025 | 45 |
| 8 | ಶುದ್ಧ ಪರಿಸರದ ಮೂಲಕ ಮಾನವ ಮತ್ತು ಪ್ರಾಣಿಗಳ ಆರೋಗ್ಯ | ಕೊನೇಹಳ್ಳಿ | 24/09/2025 | 45 |
| 9 | ಸ್ವಚ್ಛೋತ್ಸವ 2025 | ಕೆ.ವಿ.ಕೆ., ಕೊನೇಹಳ್ಳಿ | 26/09/2025 | 40 |

## ಸಮಸ್ಯಾತ್ಮಕ ಕ್ಷೇತ್ರ ಭೇಟಿ

| ಕ್ರ. ಸಂ. | ದಿನಾಂಕ | ಸ್ಥಳ | ವಿಷಯ | ರೈತರ ಸಂಖ್ಯೆ |
|---|---|---|---|---|
| 1 | 22/07/2025 | ಅಂಚೆಕೊಪ್ಪಲು | ಸಿಗಟೋಕ ಭಾದಿತ ಬಾಳೆ ತೋಟಕ್ಕೆ ಕ್ಷೇತ್ರ ಭೇಟಿ | 8 |
| 2 | 29/07/2025 | ಅಂಚೆಕೊಪ್ಪಲು | ಸಿಗಟೋಕ ಭಾದಿತ ಬಾಳೆ ತೋಟಕ್ಕೆ ಕ್ಷೇತ್ರ ಭೇಟಿ | 9 |
| 3 | 24/09/2025 | ಜೆ.ಸಿ. ಪುರ | ಕಡಿಮೆ ಇಳುವರಿ ನೀಡುವ ಸಪೋಟಾ ಜಮೀನಿಗೆ ರೋಗನಿರ್ಣಯ ಕ್ಷೇತ್ರ ಭೇಟಿ | 8 |


| | |
|---|---|
| ಪ್ರಧಾನ ಸಂಪಾದಕರು : | ಡಾ. ಗೋವಿಂದ ಗೌಡ ವಿ<br>ಡಾ. ಎಂ. ಹೆಚ್. ಶಂಕರ |
| ಸಹ ಸಂಪಾದಕರು : | ಡಾ. ಹೆಚ್.ಬಿ. ಶಿವಪ್ಪ ನಾಯಕ<br>ಶ್ರೀ. ಮನೋಜ್ ಹೆಚ್.<br>ಡಾ. ತಸ್ಮಿಯಾ ಕೌಸರ್<br>ಡಾ. ದರ್ಶನ್ ಎಂ.ಈ<br>ಡಾ. ಕೀರ್ತಿಶಂಕರ್ ಕೆ<br>ಡಾ. ಸಿಂಧು ಪಿ.ಬಿ.<br>ಕು. ಗಾನವಿ ಬಿ.ಆರ್. |
| ಸಹಾಯಕ ಸಂಪಾದಕರು : | ಡಾ. ಸತೀಶ್. ಹೆಚ್.ಎಸ್<br>ಕು. ಶಮಾ ನಾಜ್ |

## ಪ್ರಕಾಶಕರು:

ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು,
ಐ.ಸಿ.ಎ.ಆರ್ –ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ,
ತಿಪಟೂರು, ತುಮಕೂರು ಜಿಲ್ಲೆ

| | |
|---|---|
| ವೆಬ್‌ಸೈಟ್ | http://kvktumakuru.org/img/nl/10.pdf |
| ಪುಟ ವಿನ್ಯಾಸ ಮತ್ತು ಬೆರಳಚ್ಚುಗಾರ : | ಪ್ರದೀಪ್ ಕುಮಾರ್ ಹೆಚ್. |


TQRCG